ನವೀಕರಿಸಬಹುದಾದ ಇಂಧನ

899 (1501) ಡಾ: ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

(ಅ) ನವೀಕರಿಸಬಹುದಾದ ಇಂಧನ ಮೂಲಗಳಿಂದ ಇನ್ನಷ್ಟು ವಿದ್ಯುತ್ ಉತ್ಪಾದಿಸುವ ಸಲುವಾಗಿ ಇಲಾಖೆ ಕೈಗೊಂಡಿರುವ ಕ್ರಮಗಳು ಏನು;

(ಆ) ನವೀಕರಿಸಬಹುದಾದ ಇಂಧನ ಮೂಲಗಳಿಂದ ಎಷ್ಟು ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿತ್ತು. ಎಷ್ಟು ವಿದ್ಯುತ್ ಉತ್ಪಾದನೆ ಆಗುತ್ತಿದೆ;

(ಇ) ಸೌರ ನೀತಿ ಜಾರಿಗೆ ಬಂದಿದೆಯೇ; ಇದರ ಉದ್ದೇಶ, ಕಾರ್ಯನಿರ್ವಹಣೆ ಗುರಿ ಹಾಗೂ ಉದ್ದೇಶ ತಿಳಿಸುವುದು;

(ಈ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಳಕ್ಕೆ ಕೈಗೊಂಡಿರುವ ಕ್ರಮಗಳು ಏನು; ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಳ ಆಗಿದೆಯೇ ಅಥವಾ ಕಡಿಮೆಯಾಗಿದೆಯೇ; ವಿವರಿಸುವುದು.

(ಉ) ಇಂಧನ ಇಲಾಖೆಯಲ್ಲಿ ಕೊರತೆ ಇರುವ ಸಿಬ್ಬಂದಿ ಸಂಖ್ಯೆ ಎಷ್ಟು; ಹುದ್ದೆವಾರು ವಿವರ ನೀಡುವುದು; ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕೈಗೊಂಡ ಕ್ರಮ ಏನು;

(ಊ) ಹೊಸ ವಿದ್ಯುತ್ ಉಪ ವಿಭಾಗ ಆರಂಭಿಸುವ ಗುರಿ ಸರ್ಕಾರದ ಮುಂದಿದೆಯೇ; ಇದ್ದರೆ, ಎಲ್ಲಿ ಮಾಡಲು ಉದ್ದೇಶಿಸಲಾಗಿದೆ?

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

(ಅ) ಸರ್ಕಾರವು ನವೀಕರಿಸಬಹುದಾದ ಇಂಧನ ಮೂಲಗಳಿಂದ ಹೆಚ್ಚಿನ ವಿದ್ಯುತ್ ಉತ್ಪಾದಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ:

1. ಪರಿಷ್ಕೃತ ಸೌರ ನೀತಿ 2014–21 ಅನ್ನು ಹೊರಡಿಸಿದೆ. ಸದರಿ ಸೌರ ನೀತಿ ಅವಧಿಯಲ್ಲಿ ಕನಿಷ್ಠ 2000 ಮೆ. ವ್ಯಾ ಸಾಮರ್ಥ್ಯದ ಸ್ಥಾವರಗಳನ್ನು ಸ್ಥಾಪಿಸುವ ಗುರಿ ಹೊಂದಿದೆ.

2. ನವೀಕರಿಸಬಹುದಾದ ಇಂಧನ ನೀತಿ 2009–14ನ್ನು ಪರಿಷ್ಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

3. ಮುಂದಿನ 5 ವರ್ಷಗಳಲ್ಲಿ ವಿವಿಧ ನವೀಕರಿಸಬಹುದಾದ ಇಂಧನ ಮೂಲಗಳಿಂದ 4225 ಮೆ. ವ್ಯಾ. ಸಾಮರ್ಥ್ಯದ ವಿದ್ಯುತ್ ಘಟಕ ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಕ್ರಮಗಳು ಕೆಳಕಂಡಂತಿವೆ:

ನವೀಕರಿಸಬಹುದಾದ ಇಂಧನ ಮೂಲ	**ಗುರಿ ಮೆ. ವ್ಯಾ. ನಲ್ಲಿ**
ಪವನ	1700
ಕಿರು ಜಲ	350
ಸೌರಶಕ್ತಿ	2000
ಸಹ ವಿದ್ಯುತ್, ಜೈವಿಕ ಮತ್ತು ಘನ ತ್ಯಾಜ್ಯ	175
ಒಟ್ಟು	**4225**

(ಆ) ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದಿಸಲು ಹೊಂದಿದ್ದ ಗುರಿ ಮತ್ತು ಪ್ರಸ್ತುತ ಸ್ಥಾಪಿತ ಸಾಮರ್ಥ್ಯದ ವಿವರ ಕೆಳಕಂಡಂತಿದೆ:

ನವೀಕರಿಸಬಹುದಾದ ಇಂಧನ ಮೂಲ	**ಇಂಧನ ನೀತಿ 2009–14ರ ಗುರಿ (ಮೆ. ವ್ಯಾ. ನಲ್ಲಿ)**	**ಪ್ರಸ್ತುತ ಸ್ಥಾಪಿತ ಸಾಮರ್ಥ್ಯ (ಮೆ. ವ್ಯಾ. ನಲ್ಲಿ)**
ಪವನ	2969	2501
ಕಿರುಜಲ	600	742
ಸೌರ	126	41
ಸಹ ವಿದ್ಯುತ್	281	1145

ಜೈವಿಕ	300	103
ಒಟ್ಟು	**4276**	**4532**

(ಇ) ಹೌದು. ಸೌರ ನೀತಿ 2014–21ರ ಗುರಿ ಮತ್ತು ಉದ್ದೇಶ ಈ ಕೆಳಕಂಡಂತಿದೆ:

ಸೌರ ನೀತಿಯಲ್ಲಿ ಈ ಕೆಳಕಂಡ ವರ್ಗಗಳಲ್ಲಿ ಯೋಜನೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

1. ಗ್ರಿಡ್ ಸಂಪರ್ಕಿತ ದೊಡ್ಡ ಪ್ರಮಾಣದ ಯೋಜನೆಗಳು.
2. ಗ್ರಿಡ್ ಸಂಪರ್ಕಿತ ಮೇಲ್ಛಾವಣಿ ಆಧಾರಿತ ಯೋಜನೆಗಳು.
3. ಆಫ್ ಗ್ರಿಡ್ ಯೋಜನೆಗಳು.

ಸೌರ ನೀತಿಯ ಅವಧಿಯಲ್ಲಿ ವಾರ್ಷಿಕ ಉದ್ದೇಶಿತ ಗುರಿ ಈ ಕೆಳಕಂಡಂತಿದೆ.

ವರ್ಗ	**2014–15**	**2015–16**	**2016–17**	**2017–18**	**2018–19**	**2019–20**	**2020–21**
ದೊಡ್ಡ ಪ್ರಮಾಣದ ಯೋಜನೆಗಳು	350	150	150	150	200	200	200
ಮೇಲ್ಛಾವಣಿ ಆಧಾರಿತ ಪಿವಿ	100	100	100	100	–	–	–

ರೈತರಿಗೆ ವಿದ್ಯುತ್ ಉತ್ಪಾದನೆಯಲ್ಲಿ ಪ್ರೋತ್ಸಾಹ:

ಭೂಮಿ ಹೊಂದಿರುವ ರೈತರನ್ನು ಸೌರ ವಿದ್ಯುತ್ ಉತ್ಪಾದಿಸಲು ಉತ್ತೇಜಿಸುವ ನಿಟ್ಟಿನಲ್ಲಿ ಕನಿಷ್ಠ 1 ಮೆ. ವ್ಯಾ. ಮತ್ತು ಗರಿಷ್ಠ 3 ಮೆ. ವ್ಯಾ

ಸಾಮರ್ಥ್ಯದ ಸ್ಥಾವರಗಳನ್ನು ಸ್ಥಾಪಿಸಲು ಅನುವು ಮಾಡಿಕೊಡಲಾಗುವುದು. ಈ ವರ್ಗದಲ್ಲಿ 300 ಮೆ. ವ್ಯಾ. ಸಾಮರ್ಥ್ಯದ ಸ್ಥಾವರಗಳನ್ನು ಸ್ಥಾಪಿಸಲಾಗುವುದು. ಈ ಸ್ಥಾವರಗಳಿಂದ ಉತ್ಪಾದಿಸಲ್ಪಟ್ಟ ವಿದ್ಯುತ್ತನ್ನು ಕೆ.ಇ.ಆರ್.ಸಿ. ರವರು ಕಾಲಕಾಲಕ್ಕೆ ನಿಗಧಿಪಡಿಸಿದ ದರದಲ್ಲಿ ಸರ್ಕಾರಿ ವಿದ್ಯುತ್ ಸರಬರಾಜು ಕಂಪನಿಗಳು ಖರೀದಿಸಲು ಅನುವು ಮಾಡಿಕೊಡಲಾಗುವುದು.

ಗ್ರಿಡ್ ಸಂಪರ್ಕಿತ ದೊಡ್ಡ ಪ್ರಮಾಣದ ಯೋಜನೆಗಳು:

3.ಮೆ. ವ್ಯಾ. ಸಾಮರ್ಥ್ಯಕ್ಕಿಂತ ಹೆಚ್ಚಿನ ಯೋಜನೆಗಳನ್ನು ಬಿಡ್ ಮುಖೇನ ಹಂಚಿಕೆ ಮಾಡಲಾಗುವುದು ಮತ್ತು ಈ ಸ್ಥಾವರಗಳಿಂದ ಉತ್ಪಾದಿತವಾದ ವಿದ್ಯುತ್ತನ್ನು ಎಸ್ಕಾಂಗಳ ಮುಖಾಂತರ ಖರೀದಿಸಲಾಗುವುದು.

ನವೀಕರಿಸಬಹುದಾದ ಇಂಧನ ಪ್ರಮಾಣ ಪತ್ರಗಳ ವರ್ಗದಲ್ಲಿ ಯೋಜನೆಗಳು:

ಈ ವರ್ಗದಲ್ಲಿ ಯೋಜನೆಗಳನ್ನು ಸ್ಥಾಪಿಸಬಹುದಾಗಿದ್ದು, ಸಿ.ಇ. ಆರ್.ಸಿ. ಮತ್ತು ಕೆ.ಇ.ಆರ್.ಸಿ. ರವರ ಕಾಲಕಾಲಕ್ಕೆ ಸಲ್ಲುವ ನಿಯಮಗಳ ಪ್ರಕಾರ ಆರ್ಇಸಿ ಪ್ರಯೋಜನಗಳನ್ನು ಹೊಂದಲು ಅವಕಾಶವಿದೆ.

ಸ್ವಂತ ಬಳಕೆ ಮತ್ತು ಸ್ವತಂತ್ರ ವಿದ್ಯುತ್ ಉತ್ಪಾದಕ ವರ್ಗದ ಯೋಜನೆಗಳು:

ಈ ವರ್ಗದಲ್ಲಿ ಯೋಜನೆಗಳನ್ನು ಸ್ಥಾಪಿಸಲು ಸೌರ ನೀತಿಯಲ್ಲಿ ಮುಕ್ತ ಅವಕಾಶ ನೀಡಲಾಗಿದೆ.

ಮೇಲ್ಛಾವಣಿ ಸೌರ ಪಿವಿ ಯೋಜನೆಗಳು:

ನಿವ್ವಳ ಮೀಟರಿಂಗ್ ಮಾದರಿಯಲ್ಲಿ ಮೇಲ್ಛಾವಣಿ ಗ್ರಿಡ್ ಸಂಪರ್ಕಿತ ಸೌರ ಯೋಜನೆಗಳನ್ನು ಸಾರ್ವಜನಿಕ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು, ಕೈಗಾರಿಕಾ ಕಟ್ಟಡಗಳು ಮತ್ತು ವಸತಿ ಕಟ್ಟಡಗಳ ಮೇಲೆ ಸ್ಥಾಪಿಸಿ, ಸ್ವಯಂ ಬಳಕೆಯಾಗಿ ಉಳಿದ ವಿದ್ಯುತ್ತನ್ನು ಕೆಇಆರ್ಸಿ ರವರು ಕಾಲಕಾಲಕ್ಕೆ ನಿಗಧಿಪಡಿಸಿದ ದರದಲ್ಲಿ ವಿದ್ಯುತ್ ವಿತರಣಾ ಕಂಪನಿಗಳಿಗೆ ನೀಡಲು ಅವಕಾಶ ನೀಡಲಾಗಿದೆ.

ಹಗುರ ಛಾವಣಿಯ ಮೇಲೆ ಸೌರ ವಿದ್ಯುತ್ ಪಿವಿ ಘಟಕಗಳನ್ನು ಅಳವಡಿಸಿದ್ದಲ್ಲಿ ಆ ಪ್ರದೇಶವನ್ನು ಎಫ್ಎಆರ್ ಮತ್ತು ಬಿಬಿಎಮ್ಪಿ, ಸ್ಥಳೀಯ ಸಂಸ್ಥೆಗಳು ಮತ್ತು ಪುರಸಭೆಗಳ ಸಮನ್ವಯದೊಂದಿಗೆ ವಿನಾಯಿತಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ಇತರ ಉತ್ತೇಜನಗಳು:

ಕರ್ನಾಟಕ ರಾಜ್ಯದಾದ್ಯಂತ ಸೌರ ಪಾರ್ಕಗಳ ಸ್ಥಾಪನೆ

ಗ್ರೀಡ್ ಸಂಪರ್ಕಿತ ಸೌರ ಸ್ಥಾವರಗಳನ್ನು ನೀರಾವರಿ ಕಾಲುವೆಯ ಮೇಲೆ ಸ್ಥಾಪಿಸುವುದು.

ಹೈಬ್ರೀಡ್ ಮಾದರಿಯ ಗ್ರಿಡ್ ಸಂಪರ್ಕಿತ ಸೌರ ಶಕ್ತಿ ಯೋಜನೆಗಳು ಸ್ಥಾಪಿಸುವುದು.

ಕೆ.ಆರ್.ಇ.ಡಿ.ಎಲ್ ನಲ್ಲಿ ಸರ್ಕಾರಿ / ಸರ್ಕಾರೇತರ ಲ್ಯಾಂಡ್ ಬ್ಯಾಂಕ್ ಗಳನ್ನು ಸ್ಥಾಪಿಸಲು ಕಂದಾಯ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡ ಒಂದು ಮೀಸಲಿಟ್ಟ ಕೋಶವನ್ನು ಸ್ಥಾಪಿಸಲಾಗುವುದು ಇವರು ಸರ್ಕಾರಿ / ಖಾಸಗಿ ಮೀಸಲಿಟ್ಟ ಕೋತವನ್ನು ಸ್ಥಾಪಿಸಲಾಗುವುದು. ಇವರು ಸರ್ಕಾರಿ / ಖಾಸಗಿ ಲ್ಯಾಂಡ್ ಬ್ಯಾಂಕ್ ಸ್ಥಾಪನೆ, ಎರವಲು ಶುಲ್ಕ ಇತ್ಯಾದಿಗಳನ್ನು ನೋಡಿ ಕೊಳ್ಳುವುದು.

ಭೂ ಪರಿವರ್ತನೆ ಕಾಯ್ದೆಯ ಕಲಂ 109 ರನ್ವಯ ಕೃಷಿ ಭೂಮಿ ಯನ್ನು ಸೌರ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಸಮಯಾಧಾರಿತ ಅನು ಮೋದನೆಯನ್ನು ಮತ್ತು ಭೂ ಪರಿವರ್ತನೆಯನ್ನು ನೀಡಲು ಜಿಲ್ಲಾಧಿಕಾರಿಗಳಿಗೆ ಪೂರ್ಣ ಅಧಿಕಾರ ನೀಡಲು ಸರ್ಕಾರವು ಉದ್ದೇಶಿಸಿದೆ.

ಸೌರ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಅವಶ್ಯಕವಾದ ಭೂಮಿ ಯನ್ನು ಲಭ್ಯಗೊಳಿಸಲು ಭೂ ಪರಿವರ್ತನೆಗೆ ಸರ್ಕಾರವು ಭೂ ಪರಿವರ್ತನೆ ಕಾಯ್ದೆಯ ಕಲಂ 95ಕ್ಕೆ ತಿದ್ದುಪಡಿ ತರಲು ಉದ್ದೇಶಿಸಿದೆ.

ಸೌರ ವಿದ್ಯುತ್ ಯೋಜನೆಗಳು ಪರಿಸರ ಮಾಲಿನ್ಯ ನಿಯಂತ್ರಣ ಆಯೋಗದಿಂದ ಪಡೆಯಬೇಕಾದ ಅನುಮೋದನೆಗೆ ವಿನಾಯಿತಿ ನೀಡ ಲಾಗುವುದು.

ಕರ್ನಾಟಕ ಕೈಗಾರಿಕಾ ನೀತಿ ಪ್ರಕಾರ ಪ್ರವೇಶ ತೆರಿಗೆ, ಸ್ಟ್ಯಾಂಪ್ ಸುಂಕ, ನೋಂದಣಿ ಶುಲ್ಕಗಳ ವಿಷಯದಲ್ಲಿ ತೆರಿಗೆ ವಿನಾಯಿತಿಯನ್ನು ನೀಡಲಾಗುವುದು.

(ಈ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಿ ಮುಂಬರುವ ವರ್ಷ ಗಳಲ್ಲಿ ವಿದ್ಯುತ್ ಸ್ವಾವಲಂಬನೆಯನ್ನು ಸಾಧಿಸಲು ಸರ್ಕಾರವು ಕೆಳಕಂಡ ದೀರ್ಘಾವಧಿ ಕ್ರಮಗಳನ್ನು ಕೈಗೊಂಡಿರುತ್ತದೆ.

ಬಿಜಾಪುರ ಜಿಲ್ಲೆಯ ಕೂಡಗಿಯಲ್ಲಿ ಎನ್‌ಟಿಪಿಸಿ ರವರ ಸಹಯೋಗ ದೊಂದಿಗೆ 4,000 ಮೆಗಾವ್ಯಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರ ಪ್ರಗತಿಯಲ್ಲಿದ್ದು, ಇದರಲ್ಲಿ ರಾಜ್ಯದ ಪಾಲು 2000 ಮೆಗಾವ್ಯಾಟ್ ಗಳಾಗಿರುತ್ತದೆ.

ಕೆಪಿಸಿಎಲ್ ವತಿಯಿಂದ 700 ಮೆಗಾವ್ಯಾಟ್ ಸಾಮರ್ಥ್ಯದ ಬಿಟಿ ಪಿಎಸ್ ಘಟಕ–3 ಹಾಗೂ 1600 ಮೆಗಾವ್ಯಾಟ್ ಸಾಮರ್ಥ್ಯದ ಯರಮರಸ್ ಯೋಜನೆಗಳು 2014–15ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಕೆಪಿಸಿಎಲ್ ವತಿಯಿಂದ ರಾಯಚೂರು ಜಿಲ್ಲೆಯ ಯಡ್ಲಾಪುರದಲ್ಲಿ 800 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಸ್ಥಾಪನೆಗೆ ಕ್ರಮ.

ಕೆಪಿಸಿಎಲ್ ವತಿಯಿಂದ ಛತ್ತೀಸ್‌ಗಢದಲ್ಲಿ 1,600 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಸ್ಥಾಪನೆಗೆ ಕ್ರಮ.

ಕೆಪಿಸಿಎಲ್ ವತಿಯಿಂದ ಬಿದಡಿ ವಿದ್ಯುತ್ ಕೇಂದ್ರದಲ್ಲಿ ಮೊದಲ 700 ಮೆಗಾವ್ಯಾಟ್ ಸಾಮರ್ಥ್ಯದ ಅನಿಲಾಧಾರಿತ ಘಟಕ ಸ್ಥಾಪನೆಗೆ ಕ್ರಮ.

ಖಾಸಗಿಯವರಿಂದ ಗುಲ್ಬರ್ಗಾ ಮತ್ತು ಘಟಪ್ರಭಾದಲ್ಲಿ ತಲಾ 1320 ಮೆಗಾವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಸ್ಥಾಪನೆಗೆ ಕ್ರಮ.

ನವೀಕೃತ ಇಂಧನ ಮೂಲಗಳ ನೀತಿಯಲ್ಲಿ ತಿಳಿಸಿರುವಂತೆ ಮುಂಬರುವ ವರ್ಷಗಳಲ್ಲಿ ಸುಮಾರು 4000 ಮೆಗಾವ್ಯಾಟ್ ಉತ್ಪಾದನಾ ಸಾಮರ್ಥ್ಯ ಸೇರ್ಪಡೆಗೆ ಕ್ರಮವಹಿಸಲಾಗಿದೆ.

ಸೌರ ವಿದ್ಯುತ್ ನೀತಿಯಡಿಯಲ್ಲಿ 2014–21 ರವರೆಗೆ ಕನಿಷ್ಠ 2000 ಮೆಗಾವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳ ಸ್ಥಾಪನೆಗೆ ಕ್ರಮ.

ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ವಿದ್ಯುತ್ ಉತ್ಪಾನೆ ಹೆಚ್ಚಳ ವಾಗಿರುವ ವಿವರಗಳು ಈ ಕೆಳಕಂಡಂತಿವೆ;

ವಿದ್ಯುದಾಗಾರಗಳು	**2012–13**	**2013–14**	**2014–15 (01.04.2014 ರಿಂದ ಜೂನ್ 2014ರವರೆಗೆ)**
ಶಾಖೋತ್ಪನ್ನ	14201.12	15851.65	3813.76
ಜಲವಿದ್ಯುತ್	10151.06	12828.14	2991.75
ಪವನ ಶಕ್ತಿ	13.47	13.67	1.25
ಸೌರಶಕ್ತಿ	16.74	17.82	3.13
ಒಟ್ಟು	24382.39	28711.28	6809.89
ಪ್ರತಿದಿನ ಸರಾಸರಿ	66.80	78.66	84.07

(ಊ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕೊರತೆ ಇರುವ ಸಿಬ್ಬಂದಿಗಳ ಹುದ್ದೆವಾರು ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ, ಖಾಲಿ ಇರುವ ಅವಶ್ಯ ಹುದ್ದೆಗಳನ್ನು ತುಂಬಲು ವಹಿಸಲಾಗಿರುವ ಕ್ರಮಗಳು ಕೆಳಕಂಡಂತಿವೆ.

ಸಹಾಯಕ ಮಾರ್ಗದಾಳು ಮತ್ತು ಸ್ಟೇಷನ್ ಅಟೆಂಡೆಂಟ್ ದರ್ಜೆ–2:

2011ರ ಕವಿಪ್ರನಿನಿ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ಉದ್ಯೋಗ ಪ್ರಕಟಣೆಯಂತೆ 2000 ಸಹಾಯಕ ಮಾರ್ಗದಾಳು ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ.

ಸದರಿ ನೇಮಕಾತಿ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಉಳಿದ 500 ಸಂಖ್ಯೆಯ ಸಹಾಯಕ ಮಾರ್ಗದಾಳು ಮತ್ತು 200 ಸಂಖ್ಯೆಯ ಸ್ಟೇಷನ್ ಪರಿಚಾರಕ ದರ್ಜೆ–2 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಚಾಲನೆಗೊಳಿಸಲಾಗುವುದು.

ಸಹಾಯಕ ಇಂಜಿನಿಯರ್ (ವಿ)/ (ಸಿವಿಲ್)/ ಕಿರಿಯ ಇಂಜಿನಿಯರ್ (ವಿ) ಸಹಾಯಕ ಲೆಕ್ಕಾಧಿಕಾರಿ:

ಸರ್ಕಾರದಿಂದ ಮಂಜೂರಾಗಿರುವ 400 ಸಹಾಯಕ ಇಂಜಿನಿಯರ್ (ವಿ), 10 ಸಹಾಯಕ ಇಂಜಿನಿಯರ್(ಸಿವಿಲ್), 50 ಕಿರಿಯ ಇಂಜಿನಿಯರ್(ವಿ) ಮತ್ತು 25 ಸಹಾಯಕ ಲೆಕ್ಕಾಧಿಕಾರಿ ಹುದ್ದೆಗಳನ್ನು ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ನೌಕರರಿಗೆ ನಿಯಮಾನುಸಾರ ಮೀಸಲಾತಿ/ ಜೇಷ್ಠತೆ ಕಲ್ಪಿಸಿದ ನಂತರ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕೆ.ಆರ್.ಇ.ಡಿ.ಎಲ್ ಸಂಸ್ಥೆಯಲ್ಲಿ ಒಟ್ಟು 32 ಹುದ್ದೆಗಳು ಖಾಲಿಯಿದ್ದು, ಪ್ರಸ್ತುತ ದಿನ ನಿತ್ಯದ ಕಾರ್ಯವನ್ನು ನಿರ್ವಹಿಸಲು ಅನುವಾಗಲು 15 ಸಿಬ್ಬಂದಿಗಳನ್ನು ನಿಯೋಜನೆಯ ಮೇಲೆ ಪಡೆಯಲಾಗಿದೆ.

(ಊ) ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ, ಉಪ ವಿಭಾಗಗಳನ್ನು ರಚಿಸಲು ಇರುವ ಪ್ರಸ್ತಾವನೆಗಳ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಡಾ॥ ಕೆ. ಸುಧಾಕರ್ (ಚಿಕ್ಕಬಳ್ಳಾಪುರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1501ಕ್ಕೆ ಅನುಬಂಧ–1

ಕವಿಪ್ರನಿನಿ ಹಾಗೂ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸಿಬ್ಬಂದಿ ಕೊರತೆ ಇರುವ ಅವಶ್ಯಕ ಹುದ್ದೆಗಳ ವಿವರ (ದಿನಾಂಕ: 31.03.2014 ರ ಅಂತ್ಯಕ್ಕೆ), ಸರ್ಕಾರವು ನೇಮಕಾತಿಗಾಗಿ ಅನುಮೋದನೆ ನೀಡಿರುವ ಅವಶ್ಯ ಹುದ್ದೆಗಳ ಸಂಖ್ಯೆ ಹಾಗೂ ಹೆಚ್ಚುವರಿಯಾಗಿ ಅನುಮೋದನೆ ಕೋರಿರುವ ಅವಶ್ಯ ಹುದ್ದೆಗಳ ವಿವರವು ಈ ಕೆಳಕಂಡಂತಿರುತ್ತದೆ:

ಹುದ್ದೆಗಳು	**ಖಾಲಿ ಇರುವ ಅವಶ್ಯ ಹುದ್ದೆಗಳ ಸಂಖ್ಯೆ**	**ಸರ್ಕಾರವು ಈಗಾಗಲೇ ನೇಮಕಾತಿಗಾಗಿ, ದಿನಾಂಕ: 11.01.2011 ಮತ್ತು 20.07.2012ರಲ್ಲಿ ಅನುಮೋದನೆ ನೀಡಿರುವ ಹುದ್ದೆಗಳ ಸಂಖ್ಯೆ**	**ನಿಗಮವು, ದಿನಾಂಕ: 05.10.2013ರಲ್ಲಿ ಹೆಚ್ಚುವರಿಯಾಗಿ ಅನುಮೋದನೆ ಕೋರಿರುವ ಹುದ್ದೆಗಳ ಸಂಖ್ಯೆ**
ಸಹಾಯಕ ಇಂಜಿನಿಯರ್ (ವಿ)	1351	400	900
ಸಹಾಯಕ ಇಂಜಿನಿಯರ್ (ಸಿವಿಲ್)	54	10	10
ಕಿರಿಯ ಇಂಜಿನಿಯರ್	1300	50	600

(ವಿ)			
ಕಿರಿಯ ಇಂಜಿನಿಯರ್ (ಸಿವಿಲ್)	23	–	20
ಸಹಾಯಕ ಲೆಕ್ಕಾಧಿಕಾರಿ	391	25	200
ಸಹಾಯಕ	1234	–	175
ಕಿರಿಯ ಸಹಾಯಕ	1262	–	500
ಸಹಾಯಕ ಮಾರ್ಗದಾಳು	6886	2500	2000
ಸ್ಟೇಷನ್ ಅಟೆಂಡೆಂಟ್ ದರ್ಜೆ–2	2255	200	1000
ಒಟ್ಟು	**14756**	**3185**	**5405**

ಮಾನ್ಯ ವಿಧಾನ ಸಭಾ ಸದಸ್ಯರಾದ ಡಾ॥ ಕೆ. ಸುಧಾಕರ್ (ಚಿಕ್ಕಬಳ್ಳಾಪುರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1501ಕ್ಕೆ ಅನುಬಂಧ–2

ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಹೊಸ ಉಪ ವಿಭಾಗಗಳನ್ನು ರಚಿಸಲು ಇರುವ ಪ್ರಸ್ತಾವನೆಗಳ ವಿವರಗಳು ಕೆಳಕಂಡಂತಿವೆ.

ಕ್ರ.ಸಂ.	ವಿದ್ಯುತ್ ಸರಬರಾಜು ಕಂಪನಿ	ಹೊಸ ಉಪ–ವಿಭಾಗಗಳನ್ನು ರಚಿಸಲು ಬಂದಿರುವ ಪ್ರಸ್ತಾವನೆಗಳು
1	ಬೆ. ವಿ. ಕಂ.	ಬೆವಿಕಂ ವ್ಯಾಪ್ತಿಯಲ್ಲಿರುವ ಎಲ್ಲಾ ಉಪ ವಿಭಾಗಗಳನ್ನು ವೈಜ್ಞಾನಿಕವಾಗಿ ಹಾಗೂ ಕೆಲಸದ ಒತ್ತಡವನ್ನಾಧರಿಸಿ ಪುನರ್ರಚಿಸಲು ನಿರ್ಧರಿಸಲಾಗಿದ್ದು, ಈ ಬಗ್ಗೆ ಸಮಗ್ರವಾಗಿ ಅಧ್ಯಯನ ನಡೆಸಿ ವರದಿ ಸಲ್ಲಿಸುವ

		ಕಾರ್ಯವನ್ನು ಮೆ॥ ರಾಷ್ಟ್ರೀಯ ಉತ್ಪಾದಕತಾ ಸಂಸ್ಥೆ ರವರಿಗೆ ವಹಿಸಲಾಗಿರುತ್ತದೆ. ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.
2	ಮ. ವಿ. ಕಂ.	ಕುಂದಾಪುರ ವಿಭಾಗ ವ್ಯಾಪ್ತಿಯಲ್ಲಿ ಶಂಕರನಾರಾಯಣ ಮತ್ತು ಕೋಟ ಉಪ ವಿಭಾಗಳನ್ನು ಹಾಗೂ ಪುತ್ತೂರು ವಿಭಾಗ ವ್ಯಾಪ್ತಿಯ ಸುಬ್ರಹ್ಮಣ್ಯದಲ್ಲಿ ಉಪ ವಿಭಾಗಗಳನ್ನು ಪ್ರಾರಂಭಿಸುವ ಪ್ರಸ್ತಾವನೆಗಳು ಪರಿಶೀಲನೆಯ ಹಂತದಲ್ಲಿರುತ್ತವೆ.
3	ಚಾ.ವಿ.ಸ.ನಿ.ನಿ.	ಪ್ರಸ್ತುತ, ಚಾವಿಸನಿನಿ ವ್ಯಾಪ್ತಿಯಲ್ಲಿ ಯಾವುದೇ ಹೊಸ ಉಪವಿಭಾಗ ಆರಂಭಿಸುವ ಪ್ರಸ್ತಾವನೆ ಇರುವುದಿಲ್ಲ ಅವಶ್ಯಕತೆಯ ಆಧಾರದಲ್ಲಿ ಪರಿಗಣಿಸಲಾಗುವುದು.
4	ಹು. ವಿ. ಕಂ.	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ವ್ಯಾಪ್ತಿಯಲ್ಲಿ ಹೊಸ ಉಪ ವಿಭಾಗಗಳನ್ನು ರಚಿಸಲು ಬಂದಿರುವ ಪ್ರಸ್ತಾವನೆಗಳು ಕೆಳಕಂಡಂತಿರುತ್ತವೆ. 1. ಕಟಕೋಳ, ರಾಮದುರ್ಗ (ತಾ), ಬೆಳಗಾವಿ (ಜಿ) 2. ಯರಗಟ್ಟಿ ಮತ್ತು ಮುನವಳ್ಳಿ, ಸವದತ್ತಿ (ತಾ), ಬೆಳಗಾವಿ (ಜಿ) 3. ಸಾವಳಗಿ, ಜಮಖಂಡಿ (ತಾ), ಬಾಗಲಕೋಟ (ಜಿ) ಮತ್ತು 4. ಕೋಲಾರ, ಬಸವನ ಬಾಗೇವಾಡಿ

		(ತಾ), ವಿಜಾಪೂರ (ಜಿ) ಸದರಿ ಪ್ರಸ್ತಾವನೆಗಳ ಅವಶ್ಯಕತೆ ಹಾಗೂ ಲಭ್ಯತೆ / ಅಲಭ್ಯತೆಯನ್ನು ಪರಿಶೀಲಿಸಲು ಕಂಪನಿ ಮಟ್ಟದ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯ ವರದಿಯನ್ನಾಧರಿಸಿ ನಿಯಮಾವಳಿಗಳನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ.
5	ಗು. ವಿ. ಕಂ.	ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ವ್ಯಾಪ್ತಿಯಲ್ಲಿ ಪ್ರಾರಂಭಿಸಲಾಗುತ್ತಿರುವ ಹೊಸ ಉಪ–ವಿಭಾಗಗಳ ವಿವರಗಳು ಕೆಳಕಂಡಂತಿರುತ್ತವೆ. 1. ಯಾದಗಿರ ವಿಭಾಗದ ಕಾರ್ಯ ವ್ಯಾಪ್ತಿಯಲ್ಲಿ ಬರುವ ಗುರುಮಿಟಕಲ್ ಮತ್ತು ಹುಣಸಗಿಯಲ್ಲಿ ಉಪ–ವಿಭಾಗ ಕಛೇರಿಗಳನ್ನು ಹೊಸದಾಗಿ ಸ್ಥಾಪಿಸಲಾಗುತ್ತಿದೆ. 2. ಗಂಗಾವತಿ ವಿಭಾಗದ ಕಾರ್ಯ ವ್ಯಾಪ್ತಿಯಲ್ಲಿ ಬರುವ ಕಾರಟಗೀಯಲ್ಲಿ ಉಪ–ವಿಭಾಗ ಕಛೇರಿಯನ್ನು ಹೊಸದಾಗಿ ಸ್ಥಾಪಿಸಲಾಗುತ್ತಿದೆ. 3. ರಾಯಚೂರು ವಿಭಾಗದ ಕಾರ್ಯ ವ್ಯಾಪ್ತಿಯಲ್ಲಿ ಬರುವ ಸಿರಿವಾರ್‌ದಲ್ಲಿ ಉಪ–ವಿಭಾಗ ಕಛೇರಿಯನ್ನು ಹೊಸದಾಗಿ ಸ್ಥಾಪಿಸಲಾಗುತ್ತಿದೆ.

		4. ರಾಯಚೂರು ನಗರದಲ್ಲಿ ಪ್ರಸ್ತುತ ಇರುವ ಗ್ರಾಹಕರ ಸೇವಾ ಕೇಂದ್ರವನ್ನು ವಿಭಜನೆ ಮಾಡಿ ಹೊಸದಾಗಿ 2 ನಗರ ಉಪ–ವಿಭಾಗ ಕಛೇರಿಗಳನ್ನು ಪ್ರಾರಂಭಿಸಲಾಗುತ್ತಿದೆ. 5. ಹೊಸಪೇಟೆ ನಗರದಲ್ಲಿ ಪ್ರಸ್ತುತ ಇರುವ ಗ್ರಾಹಕರ ಸೇವಾ ಕೇಂದ್ರವನ್ನು ವಿಭಜನೆ ಮಾಡಿ ಹೊಸದಾಗಿ 2 ನಗರ ಉಪ–ವಿಭಾಗ ಕಛೇರಿಗಳನ್ನು ಪ್ರಾರಂಭಿಸಲಾಗುತ್ತಿದೆ. ಗುಲ್ಬರ್ಗಾ ನಗರದಲ್ಲಿ ಪ್ರಸ್ತುತ ಇರುವ 2 ನಗರ ಉಪ–ವಿಭಾಗಗಳನ್ನು ವಿಂಗಡಣೆ ಮಾಡಿ ಹೊಸದಾಗಿ 2 ಉಪ–ವಿಭಾಗ ಕಛೇರಿಗಳನ್ನು ಪ್ರಾರಂಭಿಸಲಾಗುತ್ತಿದೆ.

ತೋಟಗಾರಿಕಾ ಕ್ಷೇತ್ರ ತೆರೆಯುವುದು

900 (409); ಡಾ: ಉಮೇಶ್ ಜಿ. ಜಾಧವ್ (ಚಿಂಚೋಳಿ)

(ಅ) ಚಿಂಚೋಳಿ ಮತ ಕ್ಷೇತ್ರದ ವ್ಯಾಪ್ತಿಗೆ ಬರುವ ಕೆಳಕಂಡ ಮುಲ್ಲಾಮಾರಿ ಯೋಜನೆಯ ನಾಗರಾಜ್ ಜಲಾಶಯದ ಬಳಿ ಭೂಸ್ವಾಧೀನಪಡಿಸಿ ಕೊಂಡು ಜಮೀನಿನಲ್ಲಿ ತೋಟಗಾರಿಕಾ ಕ್ಷೇತ್ರ ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮವೇನು?